**<u>ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಕೊಪ್ಪಳ</u>**

**ಸಿ.ಸಿ. ಸಂಖ್ಯೆಃ 225/2020**

**ದಿನಾಂಕಃ 20-12-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

| | |
|---|---|
| ಸಿಡಬ್ಲೂ- | 06 |
| ಪಿಡಬ್ಲೂ- | 06 |

**<u>ಪಾಟೀ ಸವಾಲು ಃ ಆರೋಪಿ ಪರ ಶ್ರೀ ಎಸ್.ಎ. ವಕೀಲರಿಂದಃ</u>**

ನಾನು 2024 ರಲ್ಲಿ ಭೂಮಿ ಸೆಕ್ಷನ್ ನಲ್ಲಿ ತಹಶೀಲ್ದಾರ ಕಚೇರಿಯಲ್ಲಿ ಡಾಟಾ ಅಪರೇಟರ್ ಅಂತಾ ಕೆಲಸ ಮಾಡಿದ್ದೇನೆ. ಆಗ ಪುಟ್ಟರಾಮಯ್ಯ ತಹಶೀಲ್ದಾರ ಇದ್ದರು. ನಾನು ಶರಣಪ್ಪ ಗಾಳಿಯವರ ಮೇಲೆ ಫಿರ್ಯಾದಿ ಕೊಟ್ಟಿಲ್ಲ, ಪ್ರಭಾಕರ ಭಟ್ಟ ಶಿರಸ್ತೆದಾರರು ಕೊಟ್ಟಿದ್ದಾರೆ.

2. ಶರಣಪ್ಪ ಗಾಳಿ ಪಹಣಿ ತಿದ್ದುಪಡೆಗಾಗಿ ಅರ್ಜಿ ಕೊಟ್ಟ ದಿನಾಂಕ ಃ- 18-09-2017 ರಲ್ಲಿ ಕೊಟ್ಟಿದ್ದಾನೆ. ಪಹಣಿ ತಿದ್ದುಪಡೆ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದೆ ಎನ್ನುವುದು ಸರಿ. ಅಂದಾಜು 2017 ರಲ್ಲಿ 1 ವರ್ಷ, 2019 ರಿಂದ 2021 ರವರೆಗೂ ಸಹ ಮಾಡಿದ್ದೇನೆ. 2019 ರಲ್ಲಿ ತಹಶೀಲ್ದಾರ ಅರ್ಜಿ ವಿಚಾರಣೆ ಮಾಡಿ ಹಿಂಬಹರ ಕೊಟ್ಟಿದ್ದಾರೆ. ಆದರೆ ಆ ದಿನ ನಾನು ಕೇಸ್ ವರ್ಕರ್ ಇರಲಿಲ್ಲ.

3. ಈಗ ತೋರಿಸಿದ ನಿಪಿ 4 ರ ಮೇಲಿರುವ ಸಹಿ ತಹಶೀಲ್ದಾರ ಮತ್ತು ತಿದ್ದುಪಡೆ ಸೆಕ್ಷನ್ ಶಿರಸ್ತೆದಾರವರದ್ದು ಇರುತ್ತದೆ. ನಿಪಿ 4 ರಲ್ಲಿ ಸರ್ವೇ ನಂ. 271/1 ಮೂಲತಃ ನರಸಪ್ಪ ವೆಂಕಪ್ಪ ಕರಮುಡಿ ಇವರ ಜಮೀನು ಇದ್ದು, ಸದರಿ ಜಮೀನನ್ನು ಆತ ಎಮ್ ಆರ್ ನಂ. 73/2004-05 ರ ಪ್ರಕಾರ ಸರ್ವೇ ನಂ. 271/2 ರ ಪರವಾಗಿ ಈರನಗೌಡ ಹನಮಂತಗೌಡ ಇವರೊಂದಿಗೆ ಅದಲು ಬದಲು ಮಾಡಿಕೊಂಡಿದ್ದಾರೆ ಎಂದು ಕಾಣಿಸಿದ್ದಾರೆ ಎಂದರೆ ಸರಿ.

4. ನಾನು ಸರ್ವೆ ನಂ. 271/1 ರ ಪಹಣಿ ಕೊಟ್ಟಿಲ್ಲ. ಸದರಿ ಪಹಣಿ ಕೈಬರಹ ಪಹಣಿ ಅಬಿಲೇಖಾಲಯದ ಶಿರಸ್ತೆದಾರ ಕೊಟ್ಟಿದ್ದಾರೆ. ನಿಡಿ 5 ಸರ್ವೇ ನಂ. 273/ಎ ನರಸಪ್ಪ ತಂದೆ ವೆಂಕಪ್ಪ ಕರಮುಡಿ ಇವರ ಹೆಸರಿಗೆ ಇದೆ ಎಂದರೆ ಸರಿ. ನಿಡಿ 5 ನಮ್ಮ ಕಚೇರಿಯಿಂದ ಪಡೆದಿದ್ದು ಎಂದರೆ ಸರಿ, ನಿಡಿ 5 ರಲ್ಲಿ ಕರಮುಡಿ ಅಂತಾ ಆರೋಪಿ ಸೇರಿಸಿಕೊಂಡಿದ್ದಾರೆ ಎನ್ನುತ್ತಾರೆ. ವಿಭಾಗ ಪತ್ರ ಬೇರೆ ಮತ್ತು ಅದಲುಬದಲು ಪತ್ರ ಬೇರೆ ಎನ್ನುವುದು ಸರಿ.

5. ಸ್ವಾಧೀನತೆ ಆಧಾರದ ಮೇಲೆ ಈರನಗೌಡ ತಂದೆ ಹನಮಂತಗೌಡ ಇವರ ಹೆಸರಿಗೆ ಇದ್ದ ಸರ್ವೆ ನಂ. 273/ಎ/1 ಕ್ಷೇತ್ರ 4 ಎಕರೆ ಇದನ್ನು ಸುಭಾಷ್ ತಂದೆ ನರಸಪ್ಪ ಮತ್ತು ಇತರೆ 4 ಜನರ ಹೆಸರಿಗೆ ಹಾಗೂ ಸರ್ವೆ ನಂ. 271/*/1 ಕ್ಷೇತ್ರ 5 ಎಕರೆ ನರಸಪ್ಪ ತಂದೆ ವೆಂಕಪ್ಪ ಇವರ ಹೆಸರಿಗೆ ಇದ್ದದ್ದನ್ನು ಈರನಗೌಡ ತಂದೆ ಹನಮಂತಗೌಡ ಇವರ ಹೆಸರಿಗೆ ವಹಿವಾಟು ಸಂಖ್ಯೆ 76/2004-05 ರ ಪ್ರಕಾರ ಆಗಿದೆ, ಆದರೆ ಅದನ್ನು ನಾನು ಎಂಟ್ರಿ ಮಾಡಿಲ್ಲ ಮತ್ತು ಆ ಅವಧಿಯಲ್ಲಿ ನಾನು ಕೆಲಸಕ್ಕೆ ಇರಲಿಲ್ಲ.

6. ನನ್ನ ಮುಖ್ಯ ವಿಚಾರಣೆಯಲ್ಲಿ ನಾನು ಜೂನ್ 2020 ರಲ್ಲಿ ಅಧಿಕಾರ ವಹಿಸಿಕೊಂಡೆ, ನಂತರ ಅಕ್ಟೊಬರ್ 2020 ರಲ್ಲಿ ಶಂಶು ವಕೀಲರು ನಮ್ಮ ತಹಶೀಲ್ದಾರಗೆ ನೊಟಿಸ ಕೊಟ್ಟದ್ದರು ಎಂದು ಹೇಳಿದ್ದೇನೆ ಎಂದರೆ ಸರಿ. ಕಂಪ್ಲೆಟ್ ಕೊಟ್ಟ ನಂತರ ಕಂಪ್ಲೆಟ್ ವಿಷಯ ಗೊತ್ತಾಗಿದೆ, ನನಗೆ ಗೊತ್ತಾದ ತಿಂಗಳು ನೆನಪಿಲ್ಲ. ನಮ್ಮ ಕಚೇರಿಯ ಓರಿಜನಲ್ ಪಹಣಿ ರಿಜಿಸ್ಟರ್ ನಲ್ಲಿ ಗಾಳಿ ಅಂತಾ ಎಂಟ್ರಿ ಇರುವುದಿಲ್ಲ.

7. ನಾನು ಪೊಲೀಸ್ ಠಾಣೆಗೆ ಹೋದ ದಿನಾಂಕ ನೆನಪಿಲ್ಲ. ಪೊಲೀಸ್ ಠಾಣೆಯಲ್ಲಿ ಅರ್ದ ಗಂಟೆ ಇದ್ದೆ ನನ್ನ ಮಾಹಿತಿ ಕೊಟ್ಟಿದ್ದೇನೆ. ಪೊಲೀಸರು ಒಂದು ಸಹಿ ಪಡೆದಿದ್ದಾರೆ, ಅದು ಸಹ ಸರಿಯಾಗಿ ನೆನಪಿಲ್ಲ. ದಿಃ- 14-01-2019 ರಂದು ಶರಣಪ್ಪ ಗಾಳಿ ಅರ್ಜಿ ಕೊಟ್ಟರು ಎನ್ನುವುದು ಸುಳ್ಳು ಎಂದರೆ ಸರಿ. ಆ ದಿನಾಂಕ ಶರಣಪ್ಪ ರವರಿಗೆ ತಹಶೀಲ್ದಾರವರು ಹಿಂಬರಹ ಕೊಟ್ಟ ದಿನಾಂಕವಾಗಿರುತ್ತದೆ.

8. ದಿಃ- 31-01-2020 ಕ್ಕೆ ತಹಶೀಲ್ದಾರ ಉತ್ತರ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಆದರೆ ದಿನಾಂಕ ಪಕ್ಕಾ ನೆನಪಿಲ್ಲ. ಶರಣಪ್ಪ ಗಾಳಿ ಯಾವುದೇ ಪಹಣಿ ತಿದ್ದುಪಡೆ ಮಾಡಿ ಅರ್ಜಿ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಶರಣಪ್ಪ ತಿದ್ದುಪಡೆ ಮಾಡಿದ ದಾಖಲಾತಿಯನ್ನು ನಾನು ಪೊಲೀಸರಿಗೆ ಕೊಟ್ಟಿಲ್ಲ. ನಾನು ವಿಜಯ ಕರಮುಡಿ ರವರ ಮಾತು ಕೇಳಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ, ಗವಿಸಿದ್ದಪ್ಪ ತಂದೆ ಈರನಗೌಡ ಇವರ ಮಾತು ಕೇಳಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಕಾರ್ಯಾಲಯದಿಂದ ಈ ಎಲ್ಲಾ ತಿದ್ದುಪಡೆ ಆಗಿದ್ದರೂ ಸಹ ಓ ಎಸ್ ನಂ. 59/2020 ರಿಂದ ಶರಣಪ್ಪ ಹಿಂದು ಸರಿಯಲಿ ಎಂದು ಈ ಕೇಸು ಮಾಡಿಸಿದ್ದೇವೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ ಇಲ್ಲ</u>**

**<u>(ಸಾಕ್ಷಿಯು ನುಡಿದಂತೆ ನನ್ನ ಉಕ್ತ ಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಿಸಲಾಯಿತು)</u>**

ಓ.ಹೇ.ಕೇ. ಸರಿ ಇದೆ.
ಸಹಿ/-
**ಸಿ.ಜೆ.ಎಮ್., ಕೊಪ್ಪಳ.**